೯. ಕುಶಾಲನಗರದ ದುರ್ಬಲ ಜನರಿಗೆ ಹುಡ್ಕೋ ಯೋಜನೆಯಲ್ಲಿ ಮನೆಗಳನ್ನು ಕಟ್ಟಿಸಿ ಕೊಡುವುದು

ಶ್ರೀಮತಿ ಸುಮಾವಸಂತ.—ಸರ್ಕಾರ ಹುಡ್ಕೋ ಯೋಜನೆಯಲ್ಲಿ ಕುಶಾಲ ನಗರದ ಕಡುಬಡವರು, ಮತ್ತು ಕಡಿಮೆ ಆದಾಯದ ದುರ್ಬಲರಿಗಾಗಿ ೧೨೪ ಮನೆಗಳನ್ನು ಕಟ್ಟಿಸಿಕೊಡುವ ಭರವಸೆ ನೀಡಿ ಅವರುಗಳಿಂದ ೩೦೦ ರೂಪಾಯಿಗಳಿಂದ ೧೦ ೦೦೦ರೂಪಾಯಿಗಳವರೆಗೂ ಮುಂಗಡ ಹಣ ಕಟ್ಟಿಸಿಕೊಳ್ಳಲಾಗಿದೆ. ಆದರೆ ಇದುವರೆಗೆ ಆ ಮನೆಗಳ ಪೂರ್ಣ ಕೆಲಸ ಆಗದೆ ಅಪೂರ್ಣವಾಗಿ ನಿಂತಿವೆ. ಇದಕ್ಕೆ ಅಧಿಕಾರಿಗಳಅಧಿಕ ಲಂಚದ ಅಪೇಕ್ಷೆಯೇ ಕಾರಣ ಎಂದೂ,ಗುತ್ತಿಗೆದಾರರು ಹೆಚ್ಚು ಲಂಚ ಕೊಡದ ಕಾರಣ ಅಧಿಕಾರಿಗಳು ಈ ಬಗ್ಗೆ ನಿರ್ಲಕ್ಷ್ಯ ಭಾವನೆ ತಾಳಿರುವುದೇ ಈ ವಿಳಂಬಕ್ಕೆ ಕಾರಣವಾಗಿದೆ. ಮನೆಗಳಿಗೆ ಕಿಟಕಿ ಬಾಗಿಲು ಮಾಡಿಸಿರುವುದಿಲ್ಲ ಇದು ಪತ್ರಿಕೆಗಳಲ್ಲೂ ಸಹ ಪ್ರಕಟವಾಗಿದೆ. ಮಾಜಿ ಮಂತ್ರಿಗಳಾದ ಜೀವಿಜಯ ವಂತು ಹುಡ್ಕೋ ಕಮೀಷನವರಿಗೂ ಈ ಬಗ್ಗೆ ದೂರು ಸಲ್ಲಿಸಲಾಗಿದೆ. ಈ ಬಗ್ಗೆ ಸರ್ಕಾರದ ಕ್ರಮವೇನು ? ಇನ್ನು ಎಷ್ಟು ದಿವಸಗಳಲ್ಲಿ ಮನೆಗಳನ್ನು ಗ್ರಾಹಕರಿಗೆ ಕೊಡಲಾಗುವುದು ಎಂಬುದನ್ನು ತಿಳಿಸಬೇಕೆಂದೂ ಆದಷ್ಟು ಬೇಗ ಮನೆಗಳನ್ನು ಗ್ರಾಹಕರಿಗೆ ಕೊಡಬೇಕಾಗಿಯೂ ನಾನು ಒತ್ತಾಯಿಸುತ್ತೇನೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಅದಕ್ಕೆ ಉತ್ತರವನ್ನು ನಾನು ತರಿಸಿಕೊಡುತ್ತೇನೆ.

೧೦. ಸುಳ್ಯ ತಾಲ್ಲೂಕಿನಲ್ಲಿ ಜನತಾ ಮನೆಗಳಿಗೆ ಹಣ ಒದಗಿಸದೆ ಇರುವುದು

ಶ್ರೀ ಕೆ. ಕುಶಾಲ.—ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನಲ್ಲಿ ೧೯೮೪-೮೫ ಮುಂಜೂರಾತಿ ನೀಡಿ ಮುಂಜೂರಾತಿಯಂತೆ ಪ್ರಯೋಜನದಾರರು ಸದ್ರಿ ಮನೆಗಳನ್ನು ನೀಡಲು ಸಂಪೂರ್ಣಗೊಳ್ಳಿದ್ದರೂ ಈ ತನಕ ಸರ್ಕಾರದ ಒಂದು ಕಂತು ಹಣವನ್ನು ಪಾವತಿ ಮಾಡಿರುವುದಿಲ್ಲ. ಪ್ರಯೋಜನಾರ್ಥಿಗಳು ಕಳೆದ ೫-೬ ತಿಂಗಳುಗಳ ಹಿಂದೆಯೇ ಮನೆಯನ್ನು ನಿರ್ಮಾಣ ಮಾಡಿ ೫-೬ ತಿಂಗಳುಗಳಿಂದ ತಾಲ್ಲೂಕು ಅಭಿವೃದ್ಧಿ ಮಂಡಳಿಗಳಲ್ಲಿ ಪ್ರತಿದಿನ ಅಲೆದಾಡಿ ಇತ್ತ ಮನೆಯ ಕಂತು ಪಾವತಿ ಆಗದೆಯೂ ಅತ್ತ ದಿನಗೂಲಿ ನೌಕರರು ಕೂಲಿ ಕೆಲಸವನ್ನು ಮಾಡದೆಯೂ ತುಂಬಾ ತೊಂದರೆಗೀಡಾಗಿದ್ದಾರೆ. ಆದರೂ ಸರ್ಕಾರ ಈ ತನಕ ಹಣ ಮುಂಜೂರು ಮಾಡದೆ ಬಿಡುಗಡೆ ಮಾಡದೇ ಇರುವುದು ತುಂಬಾ ಶೋಚನೀಯವಾಗಿದೆ.

ಈ ಮೇಲೆ ಹೇಳಿದ ವಿಷಯಗಳು ದಕ್ಷಿಣ ಕನ್ನಡ ಜಿಲ್ಲೆಯ ಪ್ರತಿ ತಾಲ್ಲೂಕಿನಲ್ಲಿಯೇ ಬಡಜನರು ಎದುರಿಸುವ ಸಮಸ್ಯೆಯಾಗಿದೆ ಮತ್ತು ೧೯೮೬-೮೭ನೇ ಸಾಲಿಗೆ ಜನತಾ ಹುಡ್ಕೋ ಮನೆಗಳನ್ನು ಬಿಡುಗಡೆ ಮಾಡಿ ವರ್ಷದ ಅಂತ್ಯವಾದರೂ ಪ್ರಯೋಜನರ್ಥಿಗಳಿಗೆ ಈ ತನಕ ವಲಸೆ ನಿರ್ಮಿಸಲು ಆಸಾಧ್ಯವಾಗಿದೆ ಕಾರಣ ಮನೆ ಬಿಡುಗಡೆ ಆಗಿದ್ದರೂ ಹಣ ಇನ್ನೂ ಬಿಡುಗಡೆ ಮಾಡದೇ ಇರುವುದು ಆದುದರಿಂದ ಸರ್ಕಾರ ಕೂಡಲೇ ತ್ವರಿತ ಕ್ರಮ ಕೈಗೊಳ್ಳುವಂತೆ ನಾನೇ ಒತ್ತಾಯಿಸುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಹೇಬ್.—ಮಾನ್ಯ ಅಧ್ಯಕ್ಷರೇ ಸರ್ಕಾರದ ವತಿಯಿಂದ ೨ ಸಾವಿರ ೨½ ಸಾವಿರ ರೂಪಾಯಿಗಳ ಸಾಲವನ್ನು ಅವರಿಗೆ ಏನು ಬಿಡುಗಡೆ ಮಾಡಬೇಕೋ ಅದನ್ನು ರಾಜ್ಯಾದ್ಯಂತ ಬಿಡುಗಡೆ ಮಾಡಲಾಗಿದೆ. ಆದರೆ ಈ ಬಗ್ಗೆ ಹುಡ್ಕೊನಿಂದಾಗಲೀ ಬ್ಯಾಂಕ್‌ನಿಂದಾಗಲಿ ಸಾಲ ನಮಗೆ ಬಂದಿಲ್ಲ. ಅದು ಬಂದಾಗ ತಕ್ಷಣ ಬಿಡುಗಡೆ ಮಾಡುತ್ತೇನೆ. ಅಲ್ಲಿಂದ ಆ ಹಣ ನಮಗೆ ಬಂದ ಹಾಗೆಲ್ಲಾ ಬಿಡುಗಡೆ ಮಾಡುತ್ತಿದ್ದೇವೆ. ಸ್ಕೀಮ್‌ವೈಸ್ ಪ್ರಕಾರ ಹಣ ಬರುತ್ತದೆ. ನಾವು ೧೯೮೫-೮೬ನೇ ಸಾಲಿನ ಹಣವನ್ನು ಈಗಾಗಲೇ ಬಿಡುಗಡೆ ಮಾಡಿದ್ದೇವೆ ೧೯೮೬-೮೭ನೇ ಸಾಲಿನ ಹಣ ಇನ್ನೂ ಬಿಡುಗಡೆ ಆಗಿಲ್ಲ. ಅಲ್ಲಿಂದ ಹಣ ಬಂದ ತಕ್ಷಣ ಬಿಡುಗಡೆ ಮಾಡುತ್ತೇವೆ.

(11) ಬಂಟ್ವಾಳ ತಾಲ್ಲೂಕಿನ ಸತ್ಯಸಾಯಿ ಸೇವಾ ವೃಂದದ ವಿದ್ಯಾರ್ಥಿ ಲೋಕಯ್ಯ ಪೂಜಾರಿಯವರು ಮೃತರಾದ ಬಗ್ಗೆ

ಶ್ರೀ ಬಿ.ಎ. ಉಮರಬ್ಬ.—ಮಾನ್ಯ ಅಧ್ಯಕ್ಷರೇ, ದಕ್ಷಿಣಕನ್ನಡ ಜಿಲ್ಲಾ, ಬಂಟ್ವಾಳ ತಾಲ್ಲೂಕಿನ ನನ್ನ ಕ್ಷೇತ್ರದ ಆಳಿಕೆಯ ಸತ್ಯಸಾಯಿ ಸೇವಾ ವೃಂದದ ವಿದ್ಯಾರ್ಥಿಯಾದ ಶ್ರೀ ಲೋಕಯ್ಯ ಪೂಜಾರಿಯವರ

ಮೃತದೇಹ ೨೦ ೨-೧೯೮೭ ರಂದು ಆರೆಸುಟ್ಟ ಪರಿಸ್ಥಿತಿಯಲ್ಲಿ ಸದ್ರಿ ವಿದ್ಯಾಸಂಸ್ಥೆಯ ಆವರಣದಲ್ಲಿ ಸಿಕ್ಕಿದೆ.

ಆನಂತರದ ಬೆಳವಣಿಗೆಯಂತೆ ಮೃತದೇಹದ ಮರಣೋತ್ತರ, ಸಾವಿನ ಬಗ್ಗೆ ಸಂಶಯ ಕೊಲೆ ಇತ್ಯಾದಿ ಆರೋಪಗಳು ಅನುಮಾನದ ಬಂಧನಗಳು ಇತ್ಯಾದಿಗಳೆಲ್ಲದೆ ಪ್ರತಿಭಟಿಸಿದ ವಿದ್ಯಾರ್ಥಿಗಳ ಮೇಲೆ ಆಸಿಡ್ ಎಸೆತ, ವಿದ್ಯಾರ್ಥಿ ಸಂಸ್ಥೆಗೆ ಜಖಂ ಮುಂತಾಗಿ ಹಲವಾರು ತಿರುವುಗಳನ್ನು ಪಡೆದು ಸಂಪೂರ್ಣ ಘಟನೆ ಒಂದು ಗೊಂದಲ ರೂಪ ತಳೆದಿದೆ.

ವಿದ್ಯಾರ್ಥಿಗಳು, ನಾಗರೀಕರು, ಸ್ಥಳೀಯ ಮುಖಂಡರು ಪೋಲೀಸ್ ಇಲಾಖೆಯ ಬಗ್ಗೆ ಅನುಮಾನ ವ್ಯಕ್ತಪಡಿಸಿ, ಸಿ.ಒ.ಡಿ. ತನಿಖೆಗೆ ಒತ್ತಾಯಿಸಿದ್ದಾರೆ. ಜಿಲ್ಲಾ ಪೋಲೀಸ್ ಅಧಿಕಾರಿಗಳು ವಿವರಣಾತ್ಮಕ ಹೇಳಿಕೆ ನೀಡಿ, ನಿಸ್ಪಕ್ಷಪಾತವಾದ ತನಿಖೆಗೆ ಭರವಸೆ ನೀಡಿದ್ದಾರೆ ಮಾತ್ರವಲ್ಲದೆ ಇನ್ನೂ ಸಮಾಧಾನವಾಗದಿದ್ದಲ್ಲಿ ಸಿ.ಒ.ಡಿ. ತನಿಖೆಯಾದರೂ ತನ್ನ ಅಭ್ಯಂತರವಿಲ್ಲ ಎಂದಿದ್ದಾರೆ.

ಸತ್ಯಾಂಶ ಏನೆಂದೇ ತಿಳಿಯದೆ ಜಿಲ್ಲೆಯಾದ್ಯಂತ ಜನರು ಕುತೂಹಲಿಗಳಾಗಿರುವ ಸಂದರ್ಭದಲ್ಲಿ ಎಲ್ಲದಕ್ಕೂ ಸಿ.ಒ.ಡಿ. ತನಿಖೆಯೇ ಸಮಂಜಸ ಎನ್ನುವ ಸಾಮಾನ್ಯ ಭಾವನೆ ಮೂಡಿರುವ ವಾತಾವರಣವನ್ನು ತಿಳಿಗೊಳಿಸುವ ಸಲುವಾಗಿ ಸರ್ಕಾರ ಪೂರ್ಣ ಘಟನೆಯನ್ನು ಸಿ.ಒ.ಡಿ. ತನಿಖೆಗೆ ಒಪ್ಪಿಸಿ,ನಿಸ್ಪಕ್ಷಪಾತ ತನಿಖೆಗೆ ಅವಕಾಶ ಕಲ್ಪಿಸಬೇಕಾಗಿ ಅತ್ಯಂತ ಕಳಕಳಿಯಿಂದ ಒತ್ತಾಯಿಸುತ್ತೇನೆ.

ಶ್ರೀ ಬಿ. ರಾಚಯ್ಯ (ಗೃಹ ಸಚಿವರು) —ಮಾನ್ಯ ಅಧ್ಯಕ್ಷರೇ, ನಾನಂ ಈ ಬಗ್ಗೆ ಪೂರ್ಣವಾದ ವಿವರಗಳನ್ನು ತರಿಸಿದ್ದೇನೆ. ಇದರ ಪ್ರಕಾರ ಇದಂ ಸಿ.ಒ.ಡಿ. ತನಿಖೆಗೆ ಸೂಕ್ತವಾಗಿದೆ ಎಂದು ನಾನಂ ಒಪ್ಪಿಕೊಳ್ಳುತ್ತಿದ್ದೇನೆ.

(12) ಕೊಡಗಂ ಮತ್ತು ಚಿಕ್ಕಮಗಳೂರು ಜಿಲ್ಲೆಯಲ್ಲಿ ಏಲಕ್ಕಿ ಬೆಳೆಗೆ ಕಟ್ಟೆ ರೋಗ ಬಂದಿರುವುದಂ

ಶ್ರೀ ಡಿ.ಎ. ಚಿನ್ನಪ್ಪ,—ಮಾನ್ಯ ಅಧ್ಯಕ್ಷರೇ, ಕೊಡಗು ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಈಗ ಸುಮಾರು ೨೦ ವರ್ಷಗಳಿಂದ ಏಲಕ್ಕಿ ಬೆಳೆಗೆ ಕಟ್ಟೆ ರೋಗ ಬಂದು ಎಲ್ಲಾ ಏಲಕ್ಕಿ ತೋಟಗಳೂ ಈಗ ಬಂಜರಾಗಿವೆ. ಈ ರೋಗದ ನಿವಾರಣೆಗಾಗಿ ಸರ್ಕಾರಕ್ಕೆ ಎಷ್ಟು ಪುನವಿಯನ್ನು ಸಲ್ಲಿಸಿದ್ದಾಗ್ಯೂ ಸರ್ಕಾರ ಹಾಗೂ ಏಲಕ್ಕಿ ಮಂಡಲಿ ಈ ರೋಗದ ಬಗ್ಗೆ ಯಾವ ಗಮನವನ್ನೂ ಹರಿಸಿರುವುದಿಲ್ಲ.ಅಲ್ಲದೆ ಇವರು ಮಲತಾಯಿ ಧೋರಣೆ ತಾಳಿದ್ದಾರೆ ಇದರಿಂದಾಗಿ ಏಲಕ್ಕಿ ಬೆಳೆಗಾರರು ತಮ್ಮ ಜೀವನೋಪಾಯವನ್ನು ನಡೆಸಲಾಗದೆ ಬಹಳ ಕಷ್ಟಪಡುತ್ತಿದ್ದಾರೆ. ಅವರು ಪಡೆಕೊಂಡಂತಹ ಸಾಲವನ್ನು ಮರುಪಾವತಿ ಮಾಡಲಾರದೆ ಈ ದಿನ ಅವರ ಆಸ್ತಿಪಾಸ್ತಿಗಳನ್ನು ಸರ್ಕಾರದವರು ಜಪ್ತಿ ಮಾಡಿ ಹರಾಜು ಮಾಡುತ್ತಿದ್ದಾರೆ. ಇದನ್ನು ತಡೆಗಟ್ಟಲು ಹಾಗೂ ಬಡವರ ಕಷ್ಟನಷ್ಟಗಳನ್ನು ನಿವಾರಿಸಲು ತುರ್ತು ಸೂಕ್ತ ಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಚ್. ಟಿ. ಕೃಷ್ಣಪ್ಪ (ಆರೋಗ್ಯ ಮಂತ್ರಿಗಳು) —ಮಾನ್ಯ ಅಧ್ಯಕ್ಷರೇ, ಮಾನ್ಯ ಕೃಷಿ ಸಚಿವರ ಪರವಾಗಿ ನಾನಂ ಇದಕ್ಕೆ ಉತ್ತರ ಕೊಡುತ್ತಿದ್ದೇನೆ.

ಕಟ್ಟೆ ರೋಗವು ಒಂದು ಬಗೆಯ ನಂಜು ರೋಗ. ಈ ರೋಗವು ನಮ್ಮ ದೇಶದಲ್ಲಿ ಸುಮಾರು ೧೯೦೦ನೇ ಇಸವಿಯಿಂದ ಕಾಣಿಸಿಕೊಂಡಿದೆ ಎಂಬ ವರದಿ ಇದೆ. ದಕ್ಷಿಣಭಾರತದ ಸಾಮಾನ್ಯ ಎಲ್ಲಾ ಏಲಕ್ಕಿ ತೋಟಗಳಲ್ಲಿಯೂ ಈ ರೋಗವು ಹರಡಿದೆ. ರೋಗವು ಎಲ್ಲಾ ವಯಸ್ಸಿನ ಗಿಡಗಳಿಗೂ ತಗಲಬಹುದು.ತೋಟದಿಂದ ತೋಟಕ್ಕೆ ರೋಗದ ಉಲ್ಬಣತೆಯ ಪ್ರಮಾಣವು ವ್ಯತ್ಯಾಸ ಹೊಂದಿರಬಹುದು ವಿಶವು ಬನಾನಾ ಎಫಿಡ್ ಎಂಬ ವಾಹಕ ಕೀಟಗಳ ಮೂಲಕ ರೋಗ ಬಂದ ಗಿಡಗಳಿಂದ ಆರೋಗ್ಯವಂತ ಗಿಡಗಳಿಗೆ ಹರಡುವುದಂ. ಈ ರೋಗವು ಉಲ್ಬಣಗೊಂಡಂತೆ ಗಿಡಗಳಿಂದ ದೊರಕುವ ಫಸಲು ಕಾಗ್ಗುತ್ತಾ ಹೋಗುವುದು.

ಈ ರೋಗದ ಹತೋಟಿ ಬಗ್ಗೆ ಸಂಶೋಧನೆಯನ್ನು ಬೆಂಗಳೂರು ವ್ಯವಸಾಯ ವಿಶ್ವವಿದ್ಯಾನಿಲಯದ ಮೂಡಿಗೆರೆ ಕೇಂದ್ರದಲ್ಲಿಯೂ, ಕೇಂದ್ರ ತೋಟಗಾರಿಕಾ ಸಂಶೋಧನಾ ಕೇಂದ್ರ, ಅಪ್ಪಂಗಲ